ನಿಮ್ಮೊಡನೆ

# ಶತಮಾನದ ಪಾಠ ಜೊತೆಗಿರಿಸಿಕೊಂಡು ಮುನ್ನಡೆಯಬೇಕಿದೆ ಬದುಕಿನ ಬಂಡಿ

‘ಶತಮಾನದ ಪಾಠ’ ಅಂತ ಯಾವುದಾದರೂ ಇದ್ದರೆ, ಅದು ಕಲಿಯುವಂತೆ ಮಾಡಿದ್ದು ಕೊರೊನಾ. ಏಕಕಾಲಕ್ಕೆ ಜಗದಗಲಕ್ಕೂ ಪಸರಿಸಿತು. ಸಮಸ್ತ ಮನುಕುಲಕ್ಕೂ ಬಿಸಿ ಮುಟ್ಟಿಸಿತು. ನಾವು ನೆಚ್ಚಿಕೊಂಡ ಹಣ, ಆ ಗಳಿಕೆಯನ್ನು ಸಾಧ್ಯವಾಗಿಸಿದ ಸಂಸ್ಥೆಗಳು, ದುಡ್ಡಿನ ಚಲಾವಣೆ ಮೇಲೆ ನಿಂತ ವ್ಯವಸ್ಥೆ... ಈ ಎಲ್ಲದರ ಮಿತಿಗಳನ್ನು ಕೊರೊನಾ ಎತ್ತಿತೋರಿಸಿತು.




ಹೊಸ ವರುಷ ಅಂದರೆ ಸಂಭ್ರಮ. ಮತ್ತಷ್ಟು ಎತ್ತರಕ್ಕೆ ಜಿಗಿಯುವ ಕನಸು. ಹೊಸ ಆಶೋತ್ತರಗಳಿಗೆ ತೆರೆದುಕೊಳ್ಳುವ ಪರ್ವಕಾಲ. ಆದರೆ, ಅಂತಹ ಸಂಭ್ರಮ, ಕನಸು ಮತ್ತು ಆಶೋತ್ತರಗಳಿಗೆ ರಾವು ಕವಿಯುವಂತೆ ಮಾಡಿದೆ ಕೊರೊನಾ ಎಂಬ ಯಃಕಶ್ಚಿತ್ ವೈರಾಣು. ನಾಳೆ ಎಂಬುದರ ಬಗೆಗೆ ಖಚಿತವಾಗಿ ಏನನ್ನೂ ಹೇಳಲಾಗದ ಸ್ಥಿತಿಗೆ ಇಡೀ ಮನುಕುಲವನ್ನು ದೂಡಿ, ವಿಷಾದದ ಮೊಗ ಹೊತ್ತು ‘ಹೋಗಿ ಬರುವೆ’ ಎನ್ನುತ್ತಿದೆ 2020. ಈ ಸಾಂಕ್ರಾಮಿಕದಿಂದ ಸೃಷ್ಟಿಯಾಗಿರುವ ಅನಿಶ್ಚಿತತೆಯ ನೆರಳು 2021ಕ್ಕೂ ಚಾಚಿಕೊಳ್ಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಹೀಗಾಗಿ, ಹೊಸ ವರುಷ ಎಂಬುದು ಒಗಟಾಗಿ ನಿಂತಿದೆ ನಮ್ಮ ಎದುರು. ಇಂತಹ ವಿಷಮ ಮತ್ತು ಸಂದಿಗ್ಧ ಸ್ಥಿತಿಯನ್ನು ಈಗ ಬದುಕಿರುವ ಯಾರೂ ತಮ್ಮ ಜೀವಿತಾವಧಿಯಲ್ಲಿ ಎಂದೂ ಎದುರುಗೊಂಡಿರಲಾರರು!

ಈ ಸಾಂಕ್ರಾಮಿಕವು ನಮ್ಮ ನಂಬಿಕೆಗಳ ನೆಲೆಗಟ್ಟನ್ನು ಶಿಥಿಲಗೊಳಿಸಿದೆ. ಭರವಸೆಯ ಬೇರುಗಳನ್ನು ಅಲುಗಾಡಿಸಿದೆ. ನಾಳೆಗಳ ಬಗೆಗೆ ಇದ್ದ ಕನಸುಗಳನ್ನು ಚದುರಿಸಿದೆ. ಅವುಗಳನ್ನೆಲ್ಲ ಹೊಸದಾಗಿ ಮತ್ತು ಹೊಸ ಬಗೆಯಲ್ಲಿ ಕಟ್ಟಿಕೊಳ್ಳಬೇಕಾದ ಅನಿವಾರ್ಯ ಈಗ ನಮ್ಮ ಮುಂದಿದೆ. ಅದು ತುರ್ತಾಗಿ ಆಗುವ ಕೆಲಸ ಅಲ್ಲ. ಅದಕ್ಕೆ ಸಮಯ ಹಿಡಿಯುತ್ತದೆ. ವ್ಯಕ್ತಿಗಳು, ಸಂಸ್ಥೆಗಳು ಮತ್ತು ವ್ಯವಸ್ಥೆಯು ಕೊರೊನಾದಿಂದ ಏನೆಲ್ಲಾ ಕಲಿತಿವೆ ಮತ್ತು ಅದನ್ನು ಹೇಗೆ ಅಳವಡಿಸಿಕೊಳ್ಳಲಿವೆ ಎಂಬುದರ ಮೇಲೆ ನಮ್ಮ ನಾಳೆಗಳು ನಿಂತಿವೆ. ಆ ನಾಳೆಗಳೇ ನಮ್ಮ ನೆಮ್ಮದಿಯನ್ನು ನಿರ್ಧರಿಸಲಿವೆ.

‘ಶತಮಾನದ ಪಾಠ’ ಅಂತ ಯಾವುದಾದರೂ ಇದ್ದರೆ, ಅದು ಕಲಿಯುವಂತೆ ಮಾಡಿದ್ದು ಕೊರೊನಾ. ಏಕಕಾಲಕ್ಕೆ ಜಗದಗಲಕ್ಕೂ ಪಸರಿಸಿತು. ಸಮಸ್ತ ಮನುಕುಲಕ್ಕೂ ಬಿಸಿ ಮುಟ್ಟಿಸಿತು. ನಾವು ನೆಚ್ಚಿಕೊಂಡ ಹಣ, ಆ ಗಳಿಕೆಯನ್ನು ಸಾಧ್ಯವಾಗಿಸಿದ ಸಂಸ್ಥೆಗಳು, ದುಡ್ಡಿನ ಚಲಾವಣೆ ಮೇಲೆ ನಿಂತ ವ್ಯವಸ್ಥೆ... ಈ ಎಲ್ಲದರ ಮಿತಿಗಳನ್ನು ಕೊರೊನಾ ಎತ್ತಿತೋರಿಸಿತು. ದುಡ್ಡಿನ ಚಲಾವಣೆ ಕಡಿಮೆ ಇರುವ ಮತ್ತು ಆ ಕಾರಣಕ್ಕೇ ನಮಗೆ ಬೇಡವಾಗಿದ್ದ ಸ್ಥಿತಿಯೊಂದರ ಸಾಮರ್ಥ್ಯವನ್ನು, ಅರ್ಥಾತ್ ಗ್ರಾಮಭಾರತದ ಶಕ್ತಿಯನ್ನು ನೆನಪಿಸಿತು.

ಜನ ದುಡಿಮೆ ಅರಸಿ ಹಳ್ಳಿಗಳಿಂದ ನಗರ–ಪಟ್ಟಣಗಳಿಗೆ ವಲಸೆ ಬಂದರು. ಆದರೆ, ಕೊರೊನಾ ತಂದೊಡ್ಡಿದ ಕಷ್ಟಕಾಲದಲ್ಲಿ ಅಲ್ಲಿ ಬದುಕಲಿಕ್ಕೆ ಆಗದೆ ಪುನಃ ಹಳ್ಳಿಗಳತ್ತ ಮುಖಮಾಡಬೇಕಾಯಿತು. ಸೇವಾಭದ್ರತೆ ಎಂಬುದು ಪದ್ಮಪತ್ರದ ಮೇಲಣ ಜಲಬಿಂದು ಎಂಬ ಕಹಿಸತ್ಯ ಅನೇಕರಿಗೆ ಮೊದಲ ಬಾರಿಗೆ ಅನುಭವಕ್ಕೆ ಬಂದಿರಬಹುದು. ಕಾರು ಖರೀದಿಸಿದವರು ತಿಂಗಳ ಕಂತು ಕಟ್ಟಲಿಕ್ಕೆ ಆಗದೆ ಪರಿತಪಿಸಬೇಕಾಯಿತು. ವ್ಯಾಪಾರ–ವಹಿವಾಟಿನಲ್ಲಿ ತೊಡಗಿಸಿಕೊಂಡವರ ಕಥೆಯೂ ಇದಕ್ಕಿಂತ ಭಿನ್ನವಲ್ಲ. ಜೀವ ಮತ್ತು ಜೀವನೋಪಾಯವನ್ನು ಸಾವಿನ ಸನಿಹಕ್ಕೆ ತಂದು ನಿಲ್ಲಿಸಿದ ಕೆಟ್ಟ ಸ್ಥಿತಿ. ಈ ಸಾಂಕ್ರಾಮಿಕ ನಿಯಂತ್ರಣಕ್ಕೆ ಒಳಪಟ್ಟಿದೆ ಎಂದು ಈಗ ಚಿತ್ರಿಸಲಾಗುತ್ತಿದೆ. ಆ ಚಿತ್ರಣದ ಆಧಾರದ ಮೇಲೆ ನಾವು ನಮ್ಮದೇ ಅಭಿಪ್ರಾಯವೊಂದನ್ನು ಕಟ್ಟಿಕೊಳ್ಳುತ್ತಿದ್ದೇವೆ – ಎರಡನೇ ಅಲೆ, ವೈರಾಣುವಿನ ರೂಪಾಂತರದ ಭೀತಿ ಇತ್ಯಾದಿಗಳ ಹೊರತಾಗಿಯೂ.

ಈ ಸಾಂಕ್ರಾಮಿಕದ ಬಗೆಗೆ ಯಾರಲ್ಲೂ ಇನ್ನೂ ಸ್ಪಷ್ಟತೆ ಇಲ್ಲ. ನಮ್ಮ ನಾಳೆಗಳಿಗೂ ಅಂತಹುದೇ ಸ್ಪಷ್ಟತೆಯ ಕೊರತೆ ಕಾಡಬಹುದು. ಈಗ ನಮ್ಮ ಮುಂದಿರುವುದು, ಪವಾಡಸದೃಶ ರೀತಿಯಲ್ಲಿ ರಾತ್ರೋರಾತ್ರಿ ಸರಿಪಡಿಸುವಂತಹ ಸಣ್ಣ ಸಮಸ್ಯೆಯೂ ಅಲ್ಲ. ನಮ್ಮ ಆದ್ಯತೆಗಳು, ಅಭಿವೃದ್ಧಿ ಪರಿಭಾಷೆ, ಅದರ ಅರ್ಥ–ವ್ಯಾಖ್ಯಾನ, ಸುಖ–ಸಂತೋಷದ ಕಲ್ಪನೆ ಎಲ್ಲವನ್ನೂ ಮುರಿದು ಕಟ್ಟಬೇಕಾದಂತಹ ಅಗತ್ಯವನ್ನು ಕೊರೊನಾ ನಮ್ಮ ಮುಂದೆ ಇರಿಸಿದೆ. ಇದನ್ನು ಮನವರಿಕೆ ಮಾಡಿಕೊಡುವುದು ಮತ್ತು ಆಗುಮಾಡುವುದು ಸುಲಭದ ಮಾತಲ್ಲ.ವಸ್ತು ವ್ಯಾಮೋಹವು ಎಲ್ಲ ವರ್ಗಗಳ ಜನರನ್ನೂ ಆವರಿಸಿದೆ. ಅದರಿಂದ ಬಿಡಿಸಿಕೊಳ್ಳುವುದು ಅಷ್ಟು ಸಲೀಸಲ್ಲ. ದೇಶವೆಂದರೆ ಜನ ಮಾತ್ರವಲ್ಲ; ಸಮಗ್ರ ಪ್ರಕೃತಿ ಎಂಬುದನ್ನು ಮನದಟ್ಟು ಮಾಡಿಸುವ ಕೆಲಸವೂ ಆಗಬೇಕಿದೆ.

ಶಿಕ್ಷಣ, ಉದ್ಯೋಗ, ಮದುವೆ, ವ್ಯಾಪಾರ–ವ್ಯವಹಾರ, ವಾಸಸ್ಥಳ... ಈ ಎಲ್ಲದರ ಬಗೆಗಿನ ನಮ್ಮ ಗ್ರಹಿಕೆಗಳನ್ನು ಮರುರೂಪಿಸಿಕೊಳ್ಳಬೇಕಾದ ತುರ್ತು ಈಗ ನಮ್ಮ ಮುಂದೆ ಇದೆ. ಕೆಲವನ್ನು ಸಣ್ಣಗೆ ತೇಪೆ ಹಚ್ಚಿ ಸರಿಪಡಿಸಲಾಗದು; ಅವು ಆಮೂಲಾಗ್ರ ಬದಲಾವಣೆ ಬಯಸಬಹುದು. ಕೊರೊನೋತ್ತರದ ಸಹಜ ಸ್ಥಿತಿಯ ಹೊಸ ಸ್ವರೂಪಕ್ಕೆ ನಾವೂ ರೂಪಾಂತರಗೊಳ್ಳಬೇಕಾಗಿದೆ. ಅದಕ್ಕೆ ದೃಢ ಸಂಕಲ್ಪ ಬೇಕು. ಅಂತಹ ಸಂಕಲ್ಪಕ್ಕೆ ಬೇಕಾದ ಇಚ್ಛಾಶಕ್ತಿಯನ್ನು ಹೊಸ ವರುಷದಲ್ಲಿ ಪಡೆಯೋಣ.

■ ಎನ್‌. ಉದಯಕುಮಾರ್